ಅಧ್ಯಕ್ಷರು:- ಅವರು ಏನಾದರೂ ಮಾಡಿಕೊಳ್ಳಲಿ ಬಿಡಿ.

ವಿಷಯ:- ಮಾಗಡಿ ಪಟ್ಟಣಕ್ಕೆ ಕುಡಿಯುವ ನೀರು ಯೋಜನೆ.

18(310)

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಮಾಗಡಿ ಪಟ್ಟಣಕ್ಕೆ ಕುಡಿಯುವ ನೀರಿನ ಸರಬರಾಜಿಗೆ ಸಂಬಂಧಿಸಿದಂತೆ ಮಂಚನಬೆಲೆ ಯೋಜನೆಯ ಕಾಮಗಾರಿಗಳು ಅತ್ಯಂತ ಮಂದಗತಿಯಲ್ಲಿ ನಡೆಯುತ್ತಿರಲು ಕಾರಣಗಳೇನು;

ಆ) ಸದರಿ ಯೋಜನೆ ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಮಾಗಡಿ ಮತ್ತು ರಾಮನಗರ ಪಟ್ಟಣಗಳಿಗೆ ಮಂಚನಬೆಲೆ ಜಲಾಶಯವನ್ನು ಮೂಲವಾಗಿಟ್ಟುಕೊಂಡು ಒಂದು ಜಂಟಿ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದ್ದಾಗ, ರಾಮನಗರ ಪಟ್ಟಣಕ್ಕೆ ಜಲಾಶಯದಿಂದ ನೀರನ್ನು ಸರಬರಾಜು ಮಾಡಬಾರದೆಂದು ರೈತರು ನ್ಯಾಯಾಲಯದ ತಡೆಯಾಜ್ಞೆ ತಂದ ಕಾರಣ ಈ ಯೋಜನೆಯು ವಿಳಂಬವಾಗಿತ್ತು. ಆದರೆ ನಂತರ ರಾಮನಗರಕ್ಕೆ ಶಿಂಶಾ ನದಿಯಿಂದ ಯೋಜನೆಯನ್ನು ಮಾಡಿದ್ದು ಮಾಗಡಿ ಪಟ್ಟಣಕ್ಕೆ ಮಾತ್ರ ಈ ಜಲಾಶಯದಿಂದ ನೀರು ಸರಬರಾಜು ಮಾಡುವ ಕಾಮಗಾರಿಗಳು ಪ್ರಗತಿಯಲ್ಲಿವೆ.

ಆ) ಸದರಿ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಡಿಸೆಂಬರ್ 1998ರ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈ ವರ್ಷದ ಬಜೆಟ್‌ನಲ್ಲಿ ಎಷ್ಟು ಹಣ ಇಟ್ಟಿದ್ದಾರೆ ಮತ್ತು ಈ ಕಾಮಾಗಾರಿಗೆ ಎಷ್ಟು ಹಣ ಖರ್ಚು ಮಾಡುತ್ತಾರೆ? ಎರಡನೆಯದು ಈ ಕಾಮಗಾರಿ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತಾರೆ ಎಂದು ತಿಳಿಸಬೇಕು. ಅಲ್ಲಿದ್ದ ಎಸ್ಕ್ಕವೇಟರ್ಸ್‌ನ್ನು ವಾಪಸ್ಸ್ ಕಳುಹಿಸಿರುವುದರಿಂದ ಅಲ್ಲಿ ಈಗ 20 ಜನ ಮಾತ್ರ ಕೆಲಸ ಮಾಡುತ್ತಿದ್ದಾರೆ. ಅಲ್ಲಿಗೆ ಮತ್ತೆ ಎಸ್ಕ್ಕವೇಟರ್ಸ್‌ನ್ನು ತರಿಸಿ ಆದಷ್ಟು ಬೇಗ ಕೆಲಸ ಮಾಡುತ್ತಿರೋ? ಅಲ್ಲಿ ಟ್ರೀಟ್‌ಮೆಂಟ್ ಪ್ಲಾಂಟ್‌ನ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ನಾಲ್ಕನೆಯದು ಕುಡಿಯುವ ನೀರಿನ ಯೋಜನೆಯನ್ನು 1998ರ ಡಿಸೆಂಬರ್ ವೇಳೆಗೆ ಮುಗಿಸುತ್ತೇವೆಂದು ಹೇಳಿದ್ದೀರಿ ಅಲ್ಲಿಯವರೆಗೂ ಮಾಗಡಿ ನಗರಕ್ಕೆ ಕುಡಿಯುವ ನೀರನ್ನು ಒದಗಿಸಲು ಬೇರೆ ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ಮಾಗಡಿ ಮತ್ತು ರಾಮನಗರಗಳಿಗೆ ಮಂಚನಬೆಲೆ ಜಲಾಶಯವನ್ನು ಮೂಲವಾಗಿಟ್ಟುಕೊಂಡು ಒಂದು ಜಂಟಿ ಯೋಜನೆಯನ್ನು ರೂಪಿಸಿದ್ದೆವು. ಇದರಲ್ಲಿ ರಾಮನಗರಕ್ಕೆ ಕುಡಿಯುವ ನೀರು ಕೊಡಬಾರದು ಎಂದು ಹೇಳಿ ಮಾಗಡಿಯವರು ಹೈಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದರು. ಈ ಯೋಜನೆಯನ್ನು

ರೂಪಿಸಿದಾಗ 255 ಲಕ್ಷ ರೂಪಾಯಿಗಳಾಗಬಹುದು ಎಂದು ನಿರ್ಧರಿಸಿದ್ದೆವು. ಈಗ ಅದು 5 ಕೋಟಿ ರೂಪಾಯಿಗಳ ಯೋಜನೆ ಆಗಿದೆ. ಈ ಯೋಜನೆ ಪ್ರಾರಂಭವಾದಗನಿಂದ ಸುಮಾರು 54 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಪೈಪ್ ಲೈನ್ ಇತ್ಯಾದಿ ಕೆಲಸ ಮಾಡಿದ್ದೇವೆ. ಇನ್ನು 16 ಕಿಲೋಮೀಟರ್‌ಗಳಲ್ಲಿ 375 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಪೈಪ್ ಲೈನ್ ಮಾಡಿ ಕನೆಕ್ಷನ್ ಕೊಡಬೇಕಾಗಿದೆ. 1996-97ನೇ ಸಾಲಿನಲ್ಲಿ 150 ಲಕ್ಷ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ. 5 ಕೋಟಿ ರೂಪಾಯಿಗಳಲ್ಲಿ ಒಂದೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. 1998ಕ್ಕೆ ಮುಗಿಸುತ್ತೇವೆಂದು ಹೇಳಿದ್ದೇವೆ. ಇದುವರೆಗೂ ಸುಮಾರು 70 ಕೊಳವೆ ಬಾವಿಗಳನ್ನು ತೋಡಿ ಕೈ ಪಂಪ್‌ಗಳನ್ನು ಅಳವಡಿಸಿ ನೀರು ಕೊಟ್ಟಿದ್ದೇವೆ. ನೀರು ಕೊಟ್ಟಿರತಕ್ಕಂಥಾದ್ದು ತಲಾ ಬಹಳ ಕಡಿಮೆ ಇದೆ. ತಲಾ 35 ಲೀಟರ್ ನೀರು ಮಾತ್ರ ಕೊಟ್ಟಿದ್ದೇವೆ. ಈ ಯೋಜನೆಯನ್ನು ಮುಗಿಸಿದರೆ ಸುಮಾರು ತಲಾ 100 ಲೀಟರ್ ಮಾತ್ರ ನೀರು ಕೊಡುವಂತಹ ಕಾರ್ಯಕ್ರಮ ಆಗುತ್ತದೆ. ಈಗ 1997-98ನೇ ಸಾಲಿನಲ್ಲಿ ಓವರ್ ಹೆಡ್ ಟ್ಯಾಂಕ್ ಮಾಡಲು ಟೆಂಡರ್ ಕರೆದಿದ್ದೇವೆ. ಅವರು ಹೇಳಿದ ಹಾಗೆ ಆದಷ್ಟು ಬೇಗ ಮಾಡಿ ಮುಗಿಸುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ:- ಅಲ್ಲಿಯವರೆಗೆ ಹೊಸ ಬೋರ್‌ವೆಲ್ ಹಾಕಿ ಪರ್ಯಾಯ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವೆ?

ಶ್ರೀ ಬಿ.ಎನ್. ಬಚ್ಚೇಗೌಡ:- ಇನ್ನೂ ಕೆಲವು ಬೋರ್‌ವೆಲ್‌ಗಳನ್ನು ಹಾಕಿ ಆ ಮೂಲಕ ನೀರು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಅದು ಬಿಟ್ಟು ನದಿ ಮೂಲದಿಂದಲೇ, ಮಂಚನಬೆಲೆಯಿಂದಲೇ ನೀರು ಬರಬೇಕೆಂದರೆ ಸಾಧ್ಯವಾದಷ್ಟೂ ಬಜೆಟ್‌ನಲ್ಲಿ ಹಣ ಒದಗಿಸಿ 1998 ರೊಳಗೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ:- ರಾಮನಗರದಲ್ಲಿ ಇರತಕ್ಕ ಪೈಪುಗಳನ್ನು ಮಾಗಡಿಗೆ ಶಿಫ್ಟ್ ಮಾಡುವುದಕ್ಕೆ ಸಾಧ್ಯವೆ? ಏಕೆಂದರೆ ಅಲ್ಲಿ ಕಾಮಗಾರಿ ನಿಂತಿದೆ. ಬೇರೆ ಕಡೆಯಿಂದ ಅಲ್ಲಿಗೆ ನೀರು ತರುತ್ತಿರುವುದರಿಂದ ಅಲ್ಲಿರತಕ್ಕ ಪೈಪುಗಳನ್ನು ಮಾಗಡಿಗೆ ತರುವುದಕ್ಕೆ ಸಾಧ್ಯವಾದರೆ ಸುಮಾರು ಮೂರು ನಾಲ್ಕು ಕಿಲೋಮೀಟರ್ ಕೆಲಸ ಬೇಗ ಆಗುತ್ತದೆ. ಜೊತೆಗೆ ಎಕ್ಸ್‌ವೇಟರ್ ಉಪಯೋಗಿಸಿ ಕೆಲಸ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟರೆ ಕೆಲಸ ಬೇಗ ಆಗುತ್ತದೆ. ಕೇವಲ 20 ಜನ ಕೆಲಸ ಮಾಡಿದರೆ ಇನ್ನು ಐದು ವರ್ಷವಾದರೂ ಅದು ಮುಗಿಯುವುದಿಲ್ಲ. ದಯವಿಟ್ಟು ಇದರ ಬಗ್ಗೆ ಸರ್ಕಾರ ತೀವ್ರ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಆಯಿತು, ಮಾಡೋಣ.